# ಕರ್ನಾಟಕ ವಿಧಾನ ಸಭೆ

| | |
|---|---|
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2829 |
| ಉತ್ತರಿಸಬೇಕಾದ ದಿನಾಂಕ | 29.03.2022 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್, ಔರಾದ್, ಹುಮನಾಬಾದ್, ಭಾಲ್ಕಿ, ಬಸವಕಲ್ಯಾಣ, ಚಿಟಗುಪ್ಪಾ ತಾಲ್ಲೂಕುಗಳ ಸಾರ್ವಜನಿಕರಿಗೆ ಕುಡಿಯುವ ನೀರಿನ ಯೋಜನೆಗಳನ್ನು ಮಾಡಲಾಗಿದೆಯೇ; | ಹೌದು. |
| ಆ) | ಮಾಡಿದ್ದಲ್ಲಿ, ಆ ಯೋಜನೆಗಳಾವುವು, ಎಷ್ಟು ನಗರಗಳಲ್ಲಿ ಕಾಮಗಾರಿಗಳು ಪ್ರಾರಂಭವಾಗಿವೆ; ಅವುಗಳು ಯಾವ ಹಂತದಲ್ಲಿವೆ; ನೀರಿನ ಮೂಲ ಯಾವುದು; (ತಾಲ್ಲೂಕುವಾರು, ಯೋಜನೆವಾರು ವಿವರ ನೀಡುವುದು) | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಬೀದರ ಜಿಲ್ಲಾ ವ್ಯಾಪ್ತಿಯಲ್ಲಿ ಈ ಕೆಳಕಂಡ ಕುಡಿಯುವ ನೀರಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br>**1) ಬೀದರ ನಗರಕ್ಕೆ ಸುಧಾರಿತ ನೀರು ಸರಬರಾಜು ಯೋಜನೆ:-**<br>ಕಾರಂಜಾ ಜಲಾಶಯ ಮೂಲದಿಂದ ಬೀದರ ನಗರದ ಸುಧಾರಿತ ನೀರು ಸರಬರಾಜು ಯೋಜನೆಯಡಿಯಲ್ಲಿ ರೂ.2490.50 ಲಕ್ಷಗಳಲ್ಲಿ ನಗರದ 5 ವಲಯ (ವಲಯ 1,2,3 ಮತ್ತು 7,8) ಗಳಲ್ಲಿ ಸುಮಾರು 90.00 ಕಿ.ಮೀ. ವಿತರಣಾ ಜಾಲ ಮತ್ತು 1700 ಸಂಖ್ಯೆ ಗೃಹ ಸಂಪರ್ಕಗಳನ್ನು (ವಲಯ 1,2,3 ರಲ್ಲಿ) ಹಾಗೂ 02 ಸಂಖ್ಯೆಯ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟದ ಜಲಸಂಗ್ರಾಹಗಳನ್ನು ನಿರ್ಮಿಸಿ, 2017 ರಲ್ಲಿ ಪೂರ್ಣಗೊಳಿಸಿ, ಚಾಲನೆಗೊಳಿಸಿ ನಗರಸಭೆ, ಬೀದರ ರವರಿಗೆ ಹಸ್ತಾಂತರಿಸಲಾಗಿರುತ್ತದೆ.<br>ಎನ್‌ಕೆಯುಎಸ್‌ಐಪಿ ಯೋಜನೆಯಡಿ ಕಾರಂಜ ಜಲಾಶಯ ಮೂಲದಿಂದ 44 ಎಂಎಲ್‌ಡಿ (2043 ಜನಸಂಖ್ಯೆಗೆ) ವಿನ್ಯಾಸಿಸಿ ಪ್ರಥಮ ಹಂತದಲ್ಲಿ 28 ಎಂಎಲ್‌ಡಿ ಪೂರೈಸಲು ಅನುಷ್ಠಾನಗೊಳಿಸಲಾಗಿದೆ. ಈಗ 28 ಎಂಎಲ್‌ಡಿ ಪೂರೈಸಲು ಸಾಮರ್ಥ್ಯವಿದ್ದರೂ ವಿದ್ಯುತ್ ವ್ಯತ್ಯಯ ಹಾಗೂ ಕುಸಿದ ಪಂಪ್ ಕಾರ್ಯಕ್ಷಮತೆ ಕಾರಣಗಳಿಂದ ಹಾಲಿ 22 ರಿಂದ 23 ಎಂಎಲ್ |

ಡಿ ನೀರನ್ನು ಬೀದರ್ ನಗರಕ್ಕೆ ನೀರು ಸರಬರಾಜು ಪೂರೈಕೆ ಮಾಡಲಾಗುತ್ತಿದೆ. ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ಕರಾರಿನಂತೆ ಗುತ್ತಿಗೆದಾರರು ನಿರ್ವಹಿಸುತ್ತಿರುತ್ತಾರೆ.

2) **ಔರಾದ ಪಟ್ಟಣ ಹಾಗೂ ಮಾರ್ಗ ಮಧ್ಯದ 6 ಹಳ್ಳಿಗಳಿಗೆ ಹಾಲಹಳ್ಳಿ ಬ್ಯಾರೇಜ್ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆ :-**

ಔರಾದ ಪಟ್ಟಣ ಹಾಗೂ ಮಾರ್ಗ ಮಧ್ಯದ 6 ಹಳ್ಳಿಗಳಿಗೆ ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಹಾಲಹಳ್ಳಿ ಬ್ಯಾರೇಜ್ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ರೂ.3150.00 ಲಕ್ಷಗಳಿಗೆ ಕೈಗೊಳ್ಳಲಾಗಿತ್ತು. ಯೋಜನೆಯನ್ನು 2016 ರಲ್ಲಿ ಚಾಲನೆಗೊಳಿಸಲಾಗಿದೆ.

ಈ ಯೋಜನೆಯ ಉಳಿತಾಯ ಮೊತ್ತದಲ್ಲಿ ಔರಾದ ಪಟ್ಟಣದ ವಲಯ-1 ಮತ್ತು 2 ರಲ್ಲಿ ವಿತರಣಾ ಜಾಲ ಅಳವಡಿಸುವ ಮತ್ತು ವಲಯ-1, 2 ಮತ್ತು 3 ರಲ್ಲಿ ಗೃಹ ಸಂಪರ್ಕ ಜೋಡಣೆ ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಕಾಮಗಾರಿಯನ್ನು ಪೂರ್ಣಗೊಳಿಸಿ, ಜೂನ್-2022 ರಲ್ಲಿ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

3) **ಹುಮನಾಬಾದ-ಚಿಟಗುಪ್ಪ ಹಾಗೂ ಮಾರ್ಗ ಮಧ್ಯದ 10 ಹಳ್ಳಿಗಳಿಗೆ ಕಾರಂಜಾ ಜಲಾಶಯ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆ ;**

ಹುಮನಾಬಾದ-ಚಿಟಗುಪ್ಪ ಹಾಗೂ ಮಾರ್ಗ ಮಧ್ಯದ 10 ಹಳ್ಳಿಗಳಿಗೆ ಕಾರಂಜಾ ಜಲಾಶಯ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂ.1904.00 ಲಕ್ಷಗಳ ಮೊತ್ತದಲ್ಲಿ ಕೈಗೊಂಡು, ಪೂರ್ಣಗೊಳಿಸಿ ಚಾಲನೆಗೊಳಿಸಿ, 2009 ರಲ್ಲಿ ಯೋಜನೆಯನ್ನು ಪುರಸಭೆ, ಹುಮನಾಬಾದ ರವರಿಗೆ ಹಸ್ತಾಂತರಿಸಲಾಗಿರುತ್ತದೆ. ಪ್ರಸ್ತುತ ಯೋಜನೆಯ ನಿರ್ವಹಣೆಯನ್ನು ಪುರಸಭೆ, ಹುಮನಾಬಾದ ರವರು ನಿರ್ವಹಿಸುತ್ತಿದ್ದಾರೆ.

**4) ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಕಾರಂಜಾ ಜಲಾಶಯ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆ :-**

ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಕಾರಂಜಾ ಜಲಾಶಯ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂ.14054.00 ಲಕ್ಷಗಳಲ್ಲಿ

| | | |
|---|---|---|
| | | ಕೈಗೊಂಡಿದ್ದು, ಸದರಿ ಕಾಮಗಾರಿಯನ್ನು ದಿನಾಂಕ 01-04-2021 ರಲ್ಲಿ ಚಾಲನೆಗೊಳಿಸಲಾಗಿದೆ.<br>**5) ಬಸವಕಲ್ಯಾಣ ನಗರಕ್ಕೆ ಸುಧಾರಿತ ನೀರು ಸರಬರಾಜು ಯೋಜನೆ :**<br>ಎನ್‌ಕೆಯುಎಸ್‌ಐಪಿ ಯೋಜನೆಯಡಿ ಬಸವಕಲ್ಯಾಣ ನಗರಕ್ಕೆ ಮುಸ್ತಾಪುರ್ ಜಲಾಶಯ ಮೂಲದಿಂದ ಹಾಲಿ ನೀರು ಸರಬರಾಜು ಯೋಜನೆ ಅಭಿವೃದ್ಧಿ ಕೈಗೊಂಡಿದ್ದು ಸಂಪೂರ್ಣಗೊಳಿಸಿ ಚಾಲ್ತಿಗೊಳಿಸಲಾಗಿದೆ. ಮುಸ್ತಾಪುರ್ ಜಲಾಶಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಸಂಗ್ರಹವಾಗದ ಕಾರಣ, ಕೊಂಗ್ಲೀ ಬ್ಯಾರೇಜುನಿಂದ ಮಳೆಗಾಲದಲ್ಲಿ ಕಚ್ಚಾ ನೀರನ್ನು ಮುಸ್ತಾಪುರ್ ಜಲಾಶಯಕ್ಕೆ ಪೂರೈಕೆ ಮಾಡುವ ಅವಶ್ಯಕ ಸೌಕರ್ಯ ಕಲ್ಪಿಸಿ ಯೋಜನೆ ಅನುಷ್ಠಾನಗೊಳಿಸಲಾಗಿದೆ.<br>ಹಾಲಿ ಇರುವ 9.08 ಎಂಎಲ್‌ಡಿ ಕುಡಿಯುವ ನೀರು ಸರಬರಾಜು ಸಾಮರ್ಥ್ಯ 16 ಎಂಎಲ್‌ಡಿ ಗೆ ಉನ್ನತೀಕರಿಸಲಾಗಿದೆ. ಇದಕ್ಕೆ ಅವಶ್ಯಕ ಅಂಶಗಳನ್ನೊಳಗೊಂಡಂತೆ 2017 ರಲ್ಲಿ ಚಾಲನೆಗೊಳಿಸಲಾಗಿದೆ. ಇದರಿಂದ ನಗರದ ಅಗತ್ಯಕ್ಕೆ ತಕ್ಕಂತೆ ಪ್ರತಿ ದಿನ ನೀರು ಸರಬರಾಜು ಮಾಡಲಾಗುತ್ತಿದೆ. ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ಕರಾರಿನಂತೆ ಗುತ್ತಿಗೆದಾರರು ನಿರ್ವಹಿಸುತ್ತಿರುತ್ತಾರೆ. |
| ಇ) | ಈ ಯೋಜನೆಯ ಕಾಮಗಾರಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ; (ಯೋಜನೆವಾರು ವಿವರ ನೀಡುವುದು) | 1) ಬೀದರ ನಗರಕ್ಕೆ ಸುಧಾರಿತ ನೀರು ಸರಬರಾಜು ಯೋಜನೆಗೆ ಮಂಜೂರಾಗಿರುವ ರೂ.2490.50 ಲಕ್ಷಗಳನ್ನು ಮೀಸಲಿಡಲಾಗಿದೆ.<br>2) ಔರಾದ ಪಟ್ಟಣಕ್ಕೆ ಹಾಗೂ ಮಾರ್ಗ ಮಧ್ಯದ ಬರುವ 6 ಹಳ್ಳಿಗಳಿಗೆ ಬ್ಯಾಲಹಳ್ಳಿ ಬ್ಯಾರೇಜ್ ಮೂಲದಿಂದ ಸಂಯುಕ್ತ ಕುಡಿಯುವ ನೀರು ಸರಬರಾಜು ಯೋಜನೆಗೆ ಮಂಜೂರಾಗಿರುವ ರೂ.3150.00 ಲಕ್ಷಗಳನ್ನು ಮೀಸಲಿಡಲಾಗಿದೆ.<br>3) ಕಾರಂಜಾ ಜಲಾಶಯ ಮೂಲದಿಂದ ಹುಮನಾಬಾದ-ಚಿಟಗುಪ್ಪ ಹಾಗೂ ಮಾರ್ಗ ಮಧ್ಯದ 10 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ ಮಂಜೂರಾಗಿರುವ ರೂ. 1904.00 ಲಕ್ಷಗಳನ್ನು ಮೀಸಲಿಡಲಾಗಿದೆ.<br>4) ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ ಮಂಜೂರಾಗಿರುವ ರೂ.14054.00 ಲಕ್ಷಗಳನ್ನು ಮೀಸಲಿಡಲಾಗಿದೆ. |

ಎನ್‌ಕೆಯುಎಸ್‌ಐಪಿ ಯೋಜನೆಯಡಿ ಬೀದರ್ ಮತ್ತು ಬಸವಕಲ್ಯಾಣ ನಗರಗಳಲ್ಲಿ ಎಡಿಬಿ ನೆರವಿನಡಿಯಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳ ಗುತ್ತಿಗೆ ಮೊತ್ತದ ವಿವರ ಕೆಳಕಂಡಂತಿದೆ:

(ರೂ.ಕೋಟಿಗಳಲ್ಲಿ)

| ಕ್ರ.ಸಂ | ನಗರ | ಗುತ್ತಿಗೆ ಮೊತ್ತ | ಪರಿಷ್ಕೃತ ಗುತ್ತಿಗೆ ಮೊತ್ತ | ಖರ್ಚು |
|---|---|---|---|---|
| | **ಬೀದರ್ ನಗರ** | | | |
| 1 | ಸಗಟು ನೀರು ಸರಬರಾಜು ವ್ಯವಸ್ಥೆ ಹಾಗೂ ನೀರು ಸಂಸ್ಕರಣ ಘಟಕ ನಿರ್ಮಾಣ (02 ಬಿಡಿಆರ್ 01) | 28.03 | 27.14 | 27.13 |
| 2 | ವಿತರಣಾ ಜಾಲ ಸುಧಾರಣೆ (ಪ್ಯಾಕೇಜು-02 ಬಿಡಿಆರ್ 01 ಎ) | 27.58 | 27.19 | 27.18 |
| 3 | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04 ಬಿಡಿಆರ್ 01). | 42.92 | 35.8 | 32.82 |
| | **ಬಸವಕಲ್ಯಾಣ ನಗರ** | | | |
| 1 | ಸಗಟು ನೀರು ಸರಬರಾಜು ವ್ಯವಸ್ಥೆ ಹಾಗೂ ಹೊಸ ನೀರು ಸಂಸ್ಕರಣ ಘಟಕ (ಪ್ಯಾಕೇಜು-02 ಬಿಎಸ್‌ಕೆ 01) | 24.89 | 26.38 | 25.73 |
| 2 | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು 04 ಬಿಎಸ್‌ಕೆ 01) | 68.02 | 54.00 | 52.83 |

| | | |
|---|---|---|
| | | ನೀರು ಪೂರೈಕೆ ಕಾರ್ಯಚರಣೆ ಮತ್ತು ನಿರ್ವಹಣೆಯ ವೆಚ್ಚವನ್ನು ನೀರಿನ ತೆರಿಗೆಯಿಂದ ಭರಿಸಬಹುದಾಗಿದೆ. |
| ಈ) | ಈ ಯೋಜನೆಗಳನ್ನು ಜಾರಿಗೆ ತಂದಿದ್ದರೆ, ಜಾರಿಗೆ ತರುವ ಕ್ರಮವೇನಾದರೂ ಸರ್ಕಾರ ಕೈಗೊಂಡಿದೆಯೇ; ಕೈಗೊಂಡಿದ್ದಲ್ಲಿ, ಯಾವಾಗ ಮತ್ತು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು? | **1. ಬೀದರ್ ನಗರ ಸುಧಾರಿತ ನೀರು ಸರಬರಾಜು ಯೋಜನೆ.**<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿ, ಚಾಲನೆಗೊಳಿಸಿ 2017 ರಲ್ಲಿ ನಗರಸಭೆ, ಬೀದರ ರವರಿಗೆ ಹಸ್ತಾಂತರಿಸಲಾಗಿರುತ್ತದೆ.<br><br>**2. ಹಾಲಹಳ್ಳಿ ಬ್ಯಾರೇಜ್ ಮೂಲದಿಂದ ಔರಾದ ಪಟ್ಟಣ ಹಾಗೂ ಮಾರ್ಗ ಮಧ್ಯದ 6 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ :-**<br>ಸದರಿ ಯೋಜನೆಯನ್ನು ಪೂರ್ಣಗೊಳಿಸಿ, ಚಾಲನೆಗೊಳಿಸಿ 2016 ರಲ್ಲಿ ಪಟ್ಟಣ ಪಂಚಾಯತಿ, ಔರಾದ ರವರಿಗೆ ಹಸ್ತಾಂತರಿಸಲಾಗಿದೆ.<br><br>**3. ಕಾರಂಜಾ ಜಲಾಶಯ ಮೂಲದಿಂದ ಹುಮನಾಬಾದ-ಚಿಟಗುಪ್ಪ ಹಾಗೂ ಮಾರ್ಗ ಮಧ್ಯದ 10 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ ;-**<br>ಸದರಿ ಯೋಜನೆಯನ್ನು 2009 ರಲ್ಲಿ ಪೂರ್ಣಗೊಳಿಸಿ, ಚಾಲನೆಗೊಳಿಸಿ ಪುರಸಭೆ ಹುಮನಾಬಾದ ರವರಿಗೆ ಹಸ್ತಾಂತರಿಸಲಾಗಿದೆ.<br>**4. ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ :-**<br>ಸದರಿ ಯೋಜನೆಯನ್ನು ದಿನಾಂಕ 01-04-2021 ರಲ್ಲಿ ಪೂರ್ಣಗೊಳಿಸಿ, ಚಾಲನೆಗೊಳಿಸಲಾಗಿದೆ. ಈ ಯೋಜನೆಯನ್ನು ಪುರಸಭೆ, ಭಾಲ್ಕಿ ರವರಿಗೆ ಹಸ್ತಾಂತರಿಸಲಾಗುವುದು.<br>**5. ಬಸವಕಲ್ಯಾಣ ನಗರಕ್ಕೆ ಸುಧಾರಿತ ನೀರು ಸರಬರಾಜು ಯೋಜನೆ :**<br>ಎನ್‌ಕೆಯುಎಸ್‌ಐಪಿ ಯೋಜನೆಯಡಿ ಕೈಗೊಂಡಿದ್ದ ಬಸವಕಲ್ಯಾಣ ನಗರದ ನೀರು ಸರಬರಾಜು ಕಾಮಗಾರಿಯನ್ನು 2017 ರಲ್ಲಿ ಚಾಲನೆಗೊಳಿಸಲಾಗಿದೆ. |

ಸಂಖ್ಯೆ: ನಅಇ 94 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು